ಶ್ರೀ ಹೆಚ್.ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಆ)ಮತ್ತು ಇ)ಸರ್ಕಾರವು ಈ ಬಗ್ಗೆ ಯಾವುದೇ ಅಧ್ಯಯನ ಮಾಡಿರುವುದಿಲ್ಲ. ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನ ಸಂಸ್ಥೆಯು ಈ ಬಗ್ಗೆ ನಡೆಸಿದ ಅಧ್ಯಯನಕ್ಕೆ ಜಿಲ್ಲಾಧಿಕಾರಿಗಳು ಭೂ ಸಂಬಂಧ ವಿವರಗಳನ್ನು ನೀಡಿರುವುದಾಗಿ ತಿಳಿದು ಬಂದಿದೆ.

ಸಾರಿಗೆ ಅದಾಲತ್

1184 (1370) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಾರಿಗೆ ಅದಾಲತ್‌ನ್ನು ಯಾವ ಯಾವ ದಿನಾಂಕಗಳಂದು ನಡೆಸಲಾಗಿದೆ ?

ಆ) ಈ ಬಗ್ಗೆ ಪ್ರತಿ ತಾಲ್ಲೂಕಿನಿಂದ ಬಂದ ಮನವಿಗಳ ಸಂಖ್ಯೆ ಎಷ್ಟು ?

ಇ) ಆ ಬಗ್ಗೆ ಪರಿಹಾರ ಮಾಡಿದ ಮನವಿಗಳ ಸಂಖ್ಯೆ ಎಷ್ಟು ?

ಈ) ಉಳಿದವುಗಳನ್ನು ಯಾವಾಗ ಪರಿಹರಿಸಲಾಗುವುದು?

ಶ್ರೀ ಸಿ. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ರಾಜ್ಯದಲ್ಲಿ ಸಾರಿಗೆ ಅದಾಲತ್‌ನ್ನು ಜನವರಿ ಮತ್ತು ಫೆಬ್ರುವರಿ 1999 ತಿಂಗಳಲ್ಲಿ ನಡೆಸಲಾಯಿತು.

ಆ) ಒಟ್ಟಾರೆ ರಾಜ್ಯದ ಎಲ್ಲಾ ತಾಲ್ಲೂಕುಗಳು ಸೇರಿ ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದುಕೊರತೆಗೆ ಕುರಿತಂತೆ 12157 ಮನವಿಗಳನ್ನು ಸ್ವೀಕರಿಸಲಾಯಿತು.

ಇ) ಒಟ್ಟಾರೆ ಸ್ವೀಕರಿಸಿದ ಮನವಿಗಳಲ್ಲಿ 8904ಕ್ಕೆ ಸ್ಥಳದಲ್ಲೇ ಪರಿಹಾರ ಒದಗಿಸಲಾಗಿದೆ.

ಈ) ಉಳಿದಿರುವ ಮನವಿಗಳ ಬಗ್ಗೆ ಪರಿಹಾರ ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ.

ಸಿಂಧಗಿ ತಾಲ್ಲೂಕಿನ ಪ್ರತಿ ಹಳ್ಳಿಗಳಿಗೆ ಸ್ಮಶಾನಕ್ಕಾಗಿ ಸ್ಥಳ

1185 (1372) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧಗಿ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲಿ ಸ್ಮಶಾನಕ್ಕಾಗಿ ಸ್ಥಳವನ್ನು ಕಾಯ್ದಿರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಆ) ಸಿಂಧಗಿ ತಾಲ್ಲೂಕಿನಲ್ಲಿ ಸ್ಮಶಾನ ಇಲ್ಲದ ಹಳ್ಳಿಗಳೆಷ್ಟು ;

ಇ) ಕೆಲವೊಂದು ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಸ್ಥಳವಿಲ್ಲದೇ ಶವಗಳನ್ನು ಹೂಳಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಆಗಿದ್ದಲ್ಲಿ, ಇದಕ್ಕೆ ಭೂಮಿ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದ ಎಲ್ಲಾ ಗ್ರಾಮದಲ್ಲಿ ಸ್ಮಶಾನಕ್ಕಾಗಿ ಜಮೀನನ್ನು ಖರೀದಿಸಲು ಅವಕಾಶ ಕಲ್ಪಿಸಿ ಸರ್ಕಾರಿ ಆದೇಶ ಸಂಖ್ಯೆ : ಕಂಇ 185 ಭೂ ಸ್ವಾಮ್ಯ 92 ದಿನಾಂಕ : 20- 10-95 ಎಲ್ಲಾ ಜಿಲ್ಲಾಧಿಕಾರಿ ಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಆ) 22 ಗ್ರಾಮಗಳು.

ಇ) ಬಂದಿದೆ.

ಈ) ಸ್ಮಶಾನ ಭೂಮಿ ಇಲ್ಲದ ಗ್ರಾಮಗಳಲ್ಲಿ ಸ್ಮಶಾನ ಸೌಲಭ್ಯ ಒದಗಿಸಲು ಸರ್ಕಾರಿ ಭೂಮಿ ಲಭ್ಯ ವಿದ್ದರೆ ಅದನ್ನು ಕಾಯ್ದಿರಿಸಲು ಇಲ್ಲದೇ ಇದ್ದಲ್ಲಿ ಈ ಕಾರ್ಯಕ್ಕಾಗಿ ಖಾಸಗಿ ಜಮೀನನ್ನು ಕ್ರಯಕ್ಕೆ ಪಡೆದು ಅಥವಾ ಸ್ವಾಧೀನಪಡಿಸಿಕೊಳ್ಳಲು ಹಣಕಾಸಿನ ಲಭ್ಯತೆಯ ಆಧಾರದ ಮೇಲೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಆಶ್ರಯ ಯೋಜನೆಯಲ್ಲಿ ಅವ್ಯವಹಾರ

1189 (1357) ಶ್ರೀ ಸುಬ್ಬಾರೆಡ್ಡಿ ಕೆ.ಎನ್ (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಸಿ.ಓ.ಡಿ. ತನಿಖೆಗೆ ಒಪ್ಪಿಸಲಾಗಿದೆಯೇ:

ಆ) ಒಪ್ಪಿಸಿದ್ದಲ್ಲಿ ಯಾವಾಗ ಒಪ್ಪಿಸಲಾಯಿತು ಹಾಗೂ ತನಿಖಾ ವರದಿಯನ್ನು ಸಿ. ಒ. ಡಿ ಇಲಾಖೆಯವರು ಸರ್ಕಾರಕ್ಕೆ ಒಪ್ಪಿಸಿದ್ದಾರೆಯೇ;

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹಾದು

ಆ) ಸರ್ಕಾರದ ಆದೇಶ ಸಂಖ್ಯೆ. ಹೆಚ್ ಯು. ಡಿ. 352, ಕೆಹೆಚ್‌ಬಿ:92 ದಿನಾಂಕ 12- 1-93ರಲ್ಲಿ ಸಿ.ಓ.ಡಿ. ತನಿಖೆ ನಡೆಸಲು ಒಪ್ಪಿಸಲಾಗಿದ್ದು, ಸಿ. ಓ. ಡಿ ಇಲಾಖೆಯವರು ತನಿಖಾ ವರದಿಯನ್ನು ದಿನಾಂಕ : 2 - 4 - 96ರಂದು ಸರ್ಕಾರಕ್ಕೆ ಒಪ್ಪಿಸಿರುತ್ತಾರೆ.

ಬೀಜ ಮತ್ತು ರಸಗೊಬ್ಬರಗಳ ಮಾರಾಟ ಕೇಂದ್ರಗಳು

1190 (1358) ಶ್ರೀ ಕೆ. ಎನ್. ಸುಬ್ಬಾರೆಡ್ಡಿ (ಶಿವಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ಸರ್ಕಾರವು ಕೃಷಿ ಪರಿಕರಗಳಾದ ಬೀಜ ಮತ್ತು ರಸಗೊಬ್ಬರ ಮಾರಾಟ ಕೇಂದ್ರಗಳ ಮೇಲೆ ದಾಳಿ ನಡೆಸಿದೆಯೇ ?

ಆ) ಹಾಗಿದ್ದಲ್ಲಿ ಎಲ್ಲಿ ಅಂತಹ ದಾಳಿಗಳನ್ನು ನಡೆಸಿದೆ;

ಇ) ಅಂತಹ ದಾಳಿ ನಡೆಸಿದ ಪ್ರಕರಣದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?